# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **394** |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಹೆಸ್ಕಾಂಗಳಲ್ಲಿ ಅರೆಕಾಲಿಕ ಸಿಬ್ಬಂದಿಗಳು ಶುಚಿಗಾರರಾಗಿ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ 642 ಇದ್ದು, ಇದರಲ್ಲಿ ಖಾಯಂಗೊಳಿಸಲು 504 ಮಂದಿ ಅರ್ಹರಿದ್ದು ಈಗಾಗಲೇ ಇಲಾಖೆಯಲ್ಲಿ 300 ಮಂಜೂರಾತಿ ಹುದ್ದೆಗಳು ಇರುವುದು ನಿಜವೇ; | ಅರೆಕಾಲಿಕ ಶುಚಿಗಾರರ ಮಂಜೂರಾತಿ ಹುದ್ದೆಗಳು ಇರುವುದಿಲ್ಲ. |
| ಆ) | ಸದರಿಯವರುಗಳ ದಿನಾಂಕ 20-12-1984 ರಲ್ಲಿ ರೂ.50/- ಗಳ ವೇತನದಲ್ಲಿ ನೇಮಿಸಿಕೊಂಡು ಪ್ರಸ್ತುತ ದುಡಿಯುತ್ತಾ ಬಂದಿದ್ದು ಈಗ ಇವರಿಗೆ ಮಾಸಿಕ ಕನಿಷ್ಠ ರೂ.16,370/- ಗಳನ್ನು ಪಡೆಯುತ್ತಿದ್ದು, ಸದರಿ ಸಿಬ್ಬಂದಿಗೆ ಯಾವುದೇ ವಿಮೆ ಸೌಲಭ್ಯ, ವೈದ್ಯಕೀಯ ಸೌಲಭ್ಯ ಹಾಗೂ ವೇತನ ಪರಿಷ್ಕರಿಸದೆ ಮತ್ತು ಸೇವೆ ಖಾಯಂ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೊರಗುತ್ತಿಗೆ ಏಜೆನ್ಸಿಗಳ ಮೂಲಕ ಅರೆಕಾಲಿಕ ಶುಚಿಗಾರರ ಸೇವೆಯನ್ನು ಪಡೆಯಲಾಗುತ್ತಿದ್ದು, ಏಜೆನ್ಸಿಗಳ ಮೂಲಕವೇ ಮಾಸಿಕ ವೇತನ ರೂ.16,370/-ಗಳನ್ನು ಪಾವತಿಸಲಾಗುತ್ತಿದ್ದು ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಟ ವೇತನಕ್ಕೆ ಹೋಲಿಸಿದ್ದಲ್ಲಿ ಹೆಚ್ಚಿಗೆ ಪಾವತಿಸಲಾಗುತ್ತಿದೆ. ಸದರಿಯವರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆಯು ಸರ್ಕಾರದಲ್ಲಿ ಇರುವುದಿಲ್ಲ. |
| ಇ) | ಬಂದಿದ್ದಲ್ಲಿ ಖಾಯಂ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; (ಮಾಹಿತಿ ಒದಗಿಸುವುದು) | |
| ಈ) | ಇವರನ್ನು ಖಾಯಂ ಮಾಡಲು ಇಲಾಖೆಯ ಸಮಿತಿಯ ತೀರ್ಮಾನ ಕೈಗೊಂಡರು ಇನ್ನೂ ಖಾಯಂ ಮಾಡದೇ ಇರಲು ಕಾರಣವೇನು; ಯಾವಾಗ ಸೇವೆ ಖಾಯಂ ಮಾಡಲಾಗುವುದು? (ವಿವರ ಒದಗಿಸುವುದು) | |

ಸಂಖ್ಯೆ: ಎನರ್ಜಿ 37 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು